ವಶಪಡಿಸಿಕೊಳ್ಳುವುದು, ವಂಚನೆ, ಸೋಗು ಮುಂತಾದವುಗಳನ್ನು ಓದುಗರಿಗೆ ಪರಿಚಯಿಸುವ ವಿವಿಧ ಕುತೂಹಲಕರ ಕಥನಗಳು ಕಾದಂಬರಿಯ ಬಹುಪಾಲನ್ನು ಆಕ್ರಮಿಸಿಕೊಂಡಿವೆ. ಕಾದಂಬರಿಯಲ್ಲಿ ಅನಂತನ ಉಪಸ್ಥಿತಿ ಕೆಲವೇ ಅಧ್ಯಾಯಗಳಲ್ಲಿವೆ ಮತ್ತು ಅವನು ದುರ್ಬಲ ಪಾತ್ರವಾಗಿಯೇ ಚಿತ್ರಿತನಾಗಿದ್ದಾನೆ. ಅನಂತ ಸಾಹಿತಿಯಾಗಿ ಪ್ರಸಿದ್ಧನಾಗುತ್ತಾನೆ; ತನ್ನ ಅಪ್ಪ ಅಮ್ಮ ಮತ್ತು ಅಕ್ಕನ ಸಂಸಾರವನ್ನು ಅವರು ಎಷ್ಟು ಅನ್ಯಾಯ ಮಾಡಿದರೂ ಆಶ್ರಯ ನೀಡಿ ಸಾಕುತ್ತಾನೆ – ಇತ್ಯಾದಿ ಅವನ ಸದ್ಗುಣಗಳು ವರದಿಯ ರೂಪದಲ್ಲಿ ಓದುಗರಿಗೆ ತಿಳಿಯುತ್ತವೆ. ಆದರೆ ಸಿದ್ಧಣ್ಣನೆದುರು ಗಟ್ಟಿಯಾಗಿ ನಿಂತು ಕಥಾನಕಕ್ಕೆ ಸಂಘರ್ಷದ ತೀವ್ರತೆಯನ್ನು ಕೊಡಬಲ್ಲಷ್ಟು ಪ್ರಾಮುಖ್ಯತೆ ಈ ಪಾತ್ರಕ್ಕೆ ಸಿಕ್ಕಿಲ್ಲ. ಹಾಗಿದ್ದರೂ ಅಗೌಕಿಯವರು ಸೃಷ್ಟಿಸಿರುವ ಎಲ್ಲ ಪಾತ್ರಗಳೂ ಖಚಿತವಾದ ಗುಣಲಕ್ಷಣಗಳು ಮತ್ತು ವರ್ತನಾ ವೈಶಿಷ್ಟ್ಯಗಳಿಂದ ಮನಸ್ಸಿನಲ್ಲಿ ಉಳಿಯುತ್ತವೆ.

ಕಾದಂಬರಿಯ ಕೊನೆಗೆ ಸಿದ್ಧಣ್ಣನ ಸಾವು ತಾನು ಒಡ್ಡಿದ ಉರುಳಿಗೆ ತಾನೇ ಸಿಕ್ಕಿಕೊಂಡ ಎಂಬ ಅಭಿಪ್ರಾಯವನ್ನು ಸೃಷ್ಟಿಸುತ್ತದೆ. 'ವಿ.ಸೂ.-' ಎಂಬ ಕೊನೆಯ ಅಧ್ಯಾಯವು ಅಗೌಕಿಯವರ ವ್ಯಂಗ್ಯ ಅಭಿವ್ಯಕ್ತಿಯ ಶಕ್ತಿಗೆ ಉದಾಹರಣೆಯಾಗಿದೆ. ಸಿದ್ಧಣ್ಣ ಸತ್ತಾಗ ಪತ್ರಿಕೆಯಲ್ಲಿ ಬರುವ ವರದಿ ಹೀಗಿದೆ: '.....ಬಿಚ್ಚೂರುಗುತ್ತಿನ ಯಜಮಾನರೂ, ಊರ ಮುಖಂಡರೂ ಆಗಿದ್ದ ಶ್ರೀಮಾನ್ ವಿ. ಸಿದ್ಧಣ್ಣ ಸೆಟ್ರು ತಾ.... ರಂದು ರಾತ್ರಿ ತಮ್ಮ ಸಾಧನಾಶ್ರಮದಲ್ಲಿ ಹೃದಯಸ್ತಂಭನದಿಂದ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದವಾಗುತ್ತದೆ. ಶ್ರೀಯುತರು ಈಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದವರೂ, ಅದರ ಆಡಳಿತದಾರರೂ ಆಗಿದ್ದರು. ವಿದ್ಯಾವಂತರೂ ವಿದ್ಯಾಪ್ರೇಮಿಗಳೂ ಆಗಿದ್ದು, ಊರ ಪರವೂರ ಸಾರ್ವಜನಿಕ ಕಾರ್ಯಕಲಾಪಗಳಲ್ಲಿ ಉತ್ಸಾಹದಿಂದ ದುಡಿಯುತಿದ್ದರು. ಆಜನ್ಮ ಬ್ರಹ್ಮಚರ್ಯೆ ವ್ರತವನ್ನು ತೊಟ್ಟಿದ್ದ ಶ್ರೀ ಸೆಟ್ರು ಯೋಗಸಾಧನೆಯನ್ನೂ ಅಭ್ಯಸಿಸುತ್ತಿದ್ದರು. ಕರುಣೆ, ಪರೋಪಕಾರ ಮತ್ತು ಸೇವೆಗಳು ಅವರ ಜೀವನ ವಾಹಿನಿಯ ತ್ರಿಪಥಗೆಯಾಗಿದ್ದರೂ, ಅವರು ನಿರಹಂಭಾವಿಗಳೂ ಸರಳ ಮನಸ್ಸಿನವರೂ ಆಗಿದ್ದರು. ಇನ್ನೂ ಪೂರ್ವವಯಸ್ಸಿನಲ್ಲಿದ್ದು, ಶ್ರೀ ಸೆಟ್ರು ಬದುಕಿರುತ್ತಿದ್ದರೆ ನಮ್ಮ ನಾಡಿಗೆ ಅವರಿಂದ ಅಪಾರ ಸೇವೆ ಸಲ್ಲಬಹುದಾಗಿತ್ತು. ಅವರ ಅಕಾಲ ಮರಣದಿಂದಾಗಿ ನಮ್ಮ ಜಿಲ್ಲೆಗೆ ತುಂಬಲಾರದ ನಷ್ಟವುಂಟಾಗಿದೆ. ಶ್ರೀ ಸೆಟ್ರ ಬಂಧು ಮಿತ್ರರಿಗುಂಟಾದ ಅಸಹನೀಯ ದುಃಖದೊಂದಿಗೆ ನಾವೂ ನಮ್ಮ ಅನುತಾಪಗಳನ್ನು ಸೂಚಿಸಿ, ಮೃತರ ಆತ್ಮಕ್ಕೆ ಶಾಂತಿ ದೊರೆಯಲೆಂದೂ ಆ ದಯಾಮಯನೊಡನೆ ಪ್ರಾರ್ಥಿಸುತ್ತೇವೆ...' ಇತ್ಯಾದಿ.

ಮರುದಿನ ಪತ್ರಿಕೆಯು ಹಿಂದಿನ ದಿನದ ವರದಿ ತಪ್ಪಾಗಿರುವುದಕ್ಕೆ ಕ್ಷಮಾಪಣೆ ಕೇಳಿ ಮತ್ತೊಂದು ವರದಿಯನ್ನು ಪ್ರಕಟಿಸುತ್ತದೆ. ಸಿದ್ಧಣ್ಣನದು ಸಹಜ ಸಾವಲ್ಲ; ಕೊಲೆಯೆಂಬ ಅನುಮಾನವಿದೆ; ಅವನ ಬಲಗೈ ಬಂಟ ಗೋಪಾಲನು ಕಣ್ಮರೆಯಾಗಿರುವುದರಿಂದ ಅವನೇ ಕೊಲೆಗಾರನಾಗಿರಬಹುದು; ಅಥವಾ ಬೇರೆ ಯಾರಾದರೊಬ್ಬರು ಗೋಪಾಲನನ್ನೂ ಅವನ ಧಣಿಯನ್ನೂ ಕೊಲೆಮಾಡಿರಬಹುದು ಎಂಬ ಅನುಮಾನವನ್ನು ವ್ಯಕ್ತಪಡಿಸುತ್ತದೆ. ಸಿದ್ಧಣ್ಣನ ಮಾವನೂ ಹೀಗೆಯೇ ಕೊಲೆಯಾದಾಗ ಅವರ ಗಾಡಿಯನ್ನು ನಡೆಸುತ್ತಿದ್ದವನೂ ಕೊಲೆಯಾಗಿದ್ದುದನ್ನು ಪತ್ರಿಕೆ ಸ್ಮರಿಸಿಕೊಳ್ಳುತ್ತದೆ. ಇಂತಹ ತಂತ್ರಗಳು ಕಾದಂಬರಿಯ ಮಟ್ಟವನ್ನು ಎತ್ತರಿಸಿವೆ.

ವಸಾಹತು ಅನುಭವವನ್ನು ದಾಖಲಿಸಿದ ಕೃತಿಯಾಗಿ 'ಒಡ್ಡಿದ ಉರುಳು' ಸ್ಮರಣೀಯವಾಗಿದೆ. ಲೇಖಕರು ಒಂದು ಕಡೆ, 'ಭಾರತದಲ್ಲಿ ಬ್ರಿಟಿಷರು ಆಳರಸರ ತಲೆತಲೆ ತಾಟಾಡಿಸಿ, ಮಧ್ಯೆ ಪ್ರವೇಶಿಸಿ ಸಂಸ್ಥಾನಗಳನ್ನು ನುಂಗುತ್ತಿದ್ದರಂತೆ. ಸಿದ್ಧಣ್ಣ ಶಾಲೆಯಲ್ಲಿ ಕಲಿಯುತ್ತಿದ್ದಾಗ ಕೇಳಿದ ಮಿಕ್ಕೆಲ್ಲ ವಿಷಯಗಳನ್ನು ಮರೆತಿದ್ದ. ಆದರೆ ಚರಿತ್ರೆಯಲ್ಲಿ ಬರುವ ಬ್ರಿಟಿಷ್ ದೊರೆಗಳ ನೀತಿಯನ್ನು ಮಾತ್ರ ಚೆನ್ನಾಗಿ ಅನುಷ್ಠಾನಕ್ಕೆ ತಂದ.' (ಪುಟ 113) ಎಂದು ಸಿದ್ಧಣ್ಣನನ್ನು ಬ್ರಿಟಿಷರಿಗೆ ಹೋಲಿಸುತ್ತಾರೆ. ದಕ್ಷಿಣ ಕನ್ನಡದ ಸ್ವಾತಂತ್ರ್ಯಪೂರ್ವ ಬದುಕನ್ನು ಈ ಕಾದಂಬರಿಯಲ್ಲಿ ಬಹಳ ವಿಶಿಷ್ಟವಾಗಿ ಕಟ್ಟಿಕೊಡಲಾಗಿದೆ. ಉದಾಹರಣೆಗೆ, ಇಲ್ಲಿನ ಅಳಿಯ ಸಂತಾನ ವ್ಯವಸ್ಥೆ, ವ್ಯವಸಾಯ ನಿರ್ವಹಣೆ, ದೇವಾಲಯ – ದೈವಾಲಯಗಳ ನಿರ್ಮಾಣ ಮತ್ತು ಆಡಳಿತ, ಜ್ಯೋತಿಷಿಗಳು ಇವೆಲ್ಲವನ್ನೂ ನೈಜವಾಗಿ ಚಿತ್ರಿಸಲಾಗಿದೆ. ಶಾಮ ತಂತ್ರಿಗಳು ಜ್ಯೋತಿಷ ಪ್ರಶ್ನೆಯ ಮೂಲಕ ಸಮಸ್ಯೆಗಳನ್ನು 'ಅರಿತುಕೊಂಡು' ಉಳಿದವರಿಗೆ